ಶ್ರೀ ಎಸ್. ಗೋಪಾಲ ಗೌಡ.—ಸರಕಾರೀ ಶಾಲೆಗಳಲ್ಲಿ 16-17 ಪರ್ಸೆಂಟ್ ಮಾತ್ರ ತೇರ್ಗಡೆಯಾಗಿದ್ದಾರೆ. ಸರಕಾರೀ ಶಾಲೆಗಳಲ್ಲಿ ಪ್ರತಿ ವರ್ಷ ಪಾರಂಭದಿಂದಲೇ ಪಾಠ ಪ್ರವಚನ ಸರಿಯಾಗಿ ಆರಂಭಮಾಡದೇ ಇರುವುದು, ಒಂದು ವರ್ಷ ಪೂರ್ತಿಯಾಗುವುದರೊಳಗೆ ಉಪಾಧ್ಯಾಯರನ್ನು ವರ್ಗ ಮಾಡುವುದು ಮತ್ತು ಅನೇಕ ಸಲ ಅನೇಕ ಶಾಲೆಗಳಲ್ಲಿ ಸಾಕಷ್ಟು ಉಪಾಧ್ಯಾಯರುಗಳು ಇಲ್ಲದೇ ಇರುವುದು ಮತ್ತು ಇನ್ನೂ ಕೆಲವು ನ್ಯೂನತೆಗಳು ಇರುವುದರಿಂದ ಹೆಚ್ಚು ವಿದ್ಯಾರ್ಥಿಗಳು ತೇರ್ಗಡೆಯಾಗದೇ ಇರುವುದಕ್ಕೆ ಕಾರಣವಾಗಿದೆಯಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಕೆಲವು ಸೂಚನೆಗಳನ್ನು ಕೊಟ್ಟಿದ್ದೀರಿ. ಅವುಗಳನ್ನು ತಪಾಸು ಮಾಡುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಉತ್ತರದಲ್ಲಿ ಹೇಳಿದ್ದೀರಿ. ಇದುವರೆಗೆ ಎಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಅದು ಬೇರೆ ವಿಷಯ. ಮಕ್ಕಳಿಗೆ ಯಾವ ರೀತಿ ಕಲಸಬೇಕು, ಹಾಗು ಏನು ನ್ಯೂನತೆಗಳಿವೆ ಎಂಬುದನ್ನು ಪರಿಶೀಲಿಸುತ್ತೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಹಳೇ ಮೈಸೂರು ಪ್ರದೇಶದಲ್ಲಿ 25 ಪರ್ಸೆಂಟ್, ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ 50 ಪರ್ಸೆಂಟ್, ಮದ್ರಾಸ್ ಕರ್ನಾಟಕ ಪ್ರದೇಶದಲ್ಲಿ 75 ಪರ್ಸೆಂಟ್, ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ 25 ಪರ್ಸೆಂಟ್, ಈ ರೀತಿ ವ್ಯತ್ಯಾಸ ಇದೆ. ಹಳೇ ಮೈಸೂರು ಶಾಲೆಗಳಲ್ಲಿ ಉಪಾಧ್ಯಾಯರು ಕಲಸದೆ ಮನೆಗೆ ಟ್ಯೂಷನ್ನಿಗೆ ಬರಲು ಹೇಳಿ, ಮನೆಯಲ್ಲಿ ಉಪಾಧ್ಯಾಯರು ಇರದೆ ಅವರು ಸಿನೇಮಾಕ್ಕೆ ಹೋಗಿ, ಟ್ಯೂಷನ್ ನಹ ಕೊಡದೇ ಇರುವುದರಿಂದ ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ಫೇಲ್ ಆಗುವುದಕ್ಕೆ ಕಾರಣವಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಇದನ್ನು ತಪಾಸು ಮಾಡಬೇಕಾಗುತ್ತದೆ.

Mr. SPEAKER.—Question Hour is over.

———

QUESTIONS FOR ANSWERS ON THE DAY

(but not taken up).

Setting up of Forensic Laboratory by the Police Department.

*Q.—570. Sri R. S. PATIL (Ramdurg).—

Will the Government be pleased to state :—

(*a*) what is the type of Forensic Laboratory proposed to be set up by the Police Department ;

(*b*) in how many stages is it proposed to be equipped ;

(*c*) what is the total cost estimated for the laboratory to be equipped fully ?

A.—R. M. PATIL (Minister for Home).—

(*a*) The Forensic Science Laboratory sanctioned by the Government of Mysore is a Technical Department which will consist of the following sections :—

(i) Biological Section.
(ii) Physical Section.
(iii) Chemical Section.
(iv) Ballistics Section.

(*b*) In two years.

(*c*) Rs. 3 lakhs.